ಸಖೀಗೀತ ಪ್ರಕಟವಾದುದು 1936ರಲ್ಲಿ. ಆ ಮೊದಲು 1932ರಲ್ಲಿ ಪ್ರಕಟವಾದ 'ಗರಿ' ಸಂಕಲನದಲ್ಲಿರುವ 'ಚತುರ್ಮುಖ ಸೌಂದರ್ಯ' ಎಂಬ ಕವನದಲ್ಲಿ "ಕಂಡ ರೂಪಕ್ಕಿಂತ ಕಾಣದೊಡವೆಯ ಸೊಬಗು/ ಉಂಡ ರುಚಿಗಳಿಗಿಂತ ಉಣ್ಣದಮೃತದ ಸವಿಯು" ಎಂಬ ಮಾತು ಬರುತ್ತದೆ. ಅಂದರೆ 'ಬೆಳಗು' ಕವನದಲ್ಲಿ ಹೇಳುವ ಹಾಗೆ 'ಕಂಡಿತು ಕಣ್ಣು ಸವಿದಿತು ನಾಲಗೆ' ಎಂದ ಕವಿಯೇ ಮುಂದಿನ ಚರಣದಲ್ಲಿ 'ಅರಿಯದು ಅಳವು ತಿಳಿಯದು ಮನವು / ಕಾಣಃ ದೋ ಬಣ್ಣಾ / ಕಣ್ಣಿಗೆ – ಕಾಣಃದೋ ಬಣ್ಣ' ಎಂದು ಹೇಳಿ ಅಲ್ಲಿಂದ ಮುಂದೆ ಮೈದೋರುವ ಶಾಂತಿರಸಕ್ಕೆ ಚಲಿಸುವ ಹಾಗೆ, ಪ್ರಕೃತಿಯನ್ನು ಐಂದ್ರಿಕವಾಗಿ ಅನುಭವಿಸುವ ಮೂಲಕ ಅದರಿಂದಾಚೆಯ ರಸಾನಂದಕ್ಕೂ ಆ ಮೂಲಕ ಆಧ್ಯಾತ್ಮಿಕ ಸೌಂದರ್ಯದೆಡೆಗೆ ಅವರು ಚಲಿಸುತ್ತಾರೆ.

ಪ್ರಕೃತಿಯಲ್ಲಿ ಹೀಗೆ ಅನುಭವಿಸುವ ಸೌಂದರ್ಯ ದರ್ಶನವನ್ನು ಗಂಡು ಹೆಣ್ಣಿನ ಅನುರಾಗವೂ ಸೇರಿದಂತೆ ಕಾವ್ಯಾನುಭವವಾಗಿ ಭಾಷೆಯ ಮೂಲಕ ಕಂಡುಕೊಳ್ಳುವ ಹುಡುಕಾಟದ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಶಬ್ದ, ನಾದಗಳಿಂದ ಅರ್ಥದ ಛಾಯೆಯನ್ನು ಕಾಣಿಸಲು ಮಾಡಿದ ಪ್ರಯತ್ನಗಳಲ್ಲಿ ರಚಿಸಿದ ಒಂದು ಕವನ 'ಮಾಯಾಕಿನ್ನರಿ'. ಐಂದ್ರಿಕ ನೆಲೆಯಿಂದ ಪಡೆದುದನ್ನು ಇಂದ್ರಿಯ ನೆಲೆಯಿಂದ ಮೀರಿಕೊಂಡು ಅನುಭವಿಸುವ ಸ್ಥಿತಿಯನ್ನು, ಭಾಷೆಯಲ್ಲಿ ನಾದವನ್ನು ಬಳಸಿ ಈ ಕವನ ಕಾಣಿಸುತ್ತದೆ. ಶಬ್ದ ಶರೀರಿಯಾದ ಕಾವ್ಯದ ವಿಶಿಷ್ಟ ಶಕ್ತಿಯನ್ನು ನಾವಿಲ್ಲಿ ಕಾಣಬಹುದು. ಮಾಸ್ತಿಯವರ ದತ್ತಣ್ಣ ಹೇಳಿದ 'ಸಿದ್ಧರ ಕಿನ್ನರಿ' (ಶಿವರಾತ್ರಿ ಕಥೆ – 5 ಸಂಕಲನ) ಎಂಬ ಕಥನ ಕವನವನ್ನು ನೆನಪಿಸಿಕೊಂಡರೂ ಮಾಯಾಕಿನ್ನರಿಯ ಭಾಷಾ ವೈಶಿಷ್ಟ್ಯ ಎದ್ದುಕಾಣುತ್ತದೆ. ಹಾಗೆಯೇ ಬೇಂದ್ರೆಯವರ ಇನ್ನೊಂದು ಕವನ 'ಕಲ್ಪವೃಕ್ಷ ವೃಂದಾವನಂಗಳಲಿ' ('ಹಾಡು–ಪಾಡು' ಸಂಕಲನ) ಕವಿತೆ 'ನಾನು ನೀನೊ ನೀ ನಾನೊ ಏನೊ ಎನುತೆನುತಲೆಚ್ಚರಾದೆ' ಎನ್ನುತ್ತದೆ. ಇಲ್ಲಿ ಪರಸ್ಪರ ಜೀವಗಳೆ (ಆತ್ಮಗಳೂ) ಕರಗಿಹೋಗುವ ರಾಸಕ್ರೀಡೆಯ ಅಲ್ಲಿನ ಚಿತ್ರಗಳಲ್ಲಿಯೂ ಮನಸ್ಸಲ್ಲಿ ಕೂಡಿದ್ದನ್ನು ಭಾಷೆ ಬೇರ್ಪಡಿಸುವಂತೆ ಯೋಗನಿದ್ದೆ ಎಚ್ಚರಗಳ ಭಾವ ಸ್ಥಿತಿ ಇದೆ.

'ಶಬ್ದ ಶ್ರುತಿಯಾದಾಗ ಮಾತು ಕೃತಿಯಾದೀತು' ಎಂಬುದು ಬೇಂದ್ರೆಯವರದೇ ಮಾತು. ಮಾಯಾಕಿನ್ನರಿಯಲ್ಲೂ 'ಶ್ರುತಿ ಹಿಡಿದು ಜತಿ ಹಿಡಿದು ನಡದೇನ' ಎಂಬ ಸಾಲಿದೆ. ಶ್ರುತಿ, ಜತಿಗಳೆರಡರ ಶ್ಲೇಷೆಯನ್ನು ಗಮನಿಸಿದರೆ ಅವು ವೈದಿಕ ವಾಙ್ಮಯದ ಮಾತುಗಳು. ಪರಾ, ಪಶ್ಯಂತಿ, ಮಧ್ಯಮಾ, ವೈಖರಿ ಎಂಬುದು ವಾಕ್ಕಿನ ನಾಲ್ಕು ಪಾದಗಳು. ಋಗ್ವೇದದಲ್ಲೂ 'ಚತ್ವಾರಿ ವಾಕ್ ಪರಿಮಿತಾ ಪದಾನಿ' ಹಾಗೆಯೇ 'ಚತ್ವಾರಿ ಶೃಂಗಾ ತ್ರಯೋ ಅಸ್ಯ ಪಾದಾಃ' ಎಂಬ ಮಾತುಗಳು ಬರುತ್ತವೆ. ಇದನ್ನು ಸೂಚಿಸುವ ಕವಿಗೆ ಭಾಷೆ ಕೇವಲ ಸಂವಹನ ಸಾಧನ ಅಲ್ಲ ಎಂಬುದು ಸ್ವಯಂವೇದ್ಯ. ಐಹಿಕ ಸೌಂದರ್ಯದಿಂದ ಆಧ್ಯಾತ್ಮಿಕ ಸೌಂದರ್ಯವನ್ನು ಹುಡುಕುವ ಕವಿಯ ಪ್ರಕ್ರಿಯೆಯಲ್ಲಿ ವೇದದ ಭಾಷಾ ಚಿಂತನೆಗಳೂ ಸೇರಿಕೊಳ್ಳುತ್ತವೆ ಎಂಬುದರಿಂದಾಗಿ 'ಶ್ರುತಿ' ಮತ್ತು 'ಜತಿ'ಗಳ ಶ್ಲೇಷಾರ್ಥವನ್ನು ಸೂಚಿಸಿದೆನಷ್ಟೇ ಹೊರತು, ಬೇಂದ್ರೆಯವರನ್ನು ಕೇವಲ ವೈದಿಕ ಕವಿ ಎನ್ನಲು ಸಾಧ್ಯವಿಲ್ಲ. ಅವರಿಗೆ ನಾಥಪಂಥದ ಸಿದ್ಧರುಗಳ ಸಾಧನೆಯ ಆಳವಾದ ಪರಿಚಯವಿತ್ತು. ವಜ್ರಯಾನದ ಮೂಲದಿಂದ ಬಂದ ನಾಥಪಂಥ ಐಹಿಕ ಸತ್ಯವನ್ನು, ದೇಹದ ಆರೋಗ್ಯ–ಸೌಂದರ್ಯಗಳನ್ನು ಸಹಜವೆಂದು ಒಪ್ಪಿಕೊಳ್ಳುತ್ತದೆ. ಆದುದರಿಂದಲೆ ಬೇಂದ್ರೆಯವರು ತಮ್ಮ ಕಾವ್ಯ ವಾಙ್ಮಯದಲ್ಲಿ ಐಹಿಕ ಸೌಂದರ್ಯವನ್ನು ತಿರಸ್ಕರಿಸುವುದಿಲ್ಲ. 'ಸಖೀಗೀತ'ದಲ್ಲಂತೂ ಸ್ಪಷ್ಟವಾಗಿ 'ಅನ್ನಕೆ ಬಾಳಾಗಿ ಕಾಮಕೆ ಹೋಳಾಗಿ / ಮಾನಕೆ ಆಳಾಗಿ ಉಸಿರೆಳೆದುದು' ಎನ್ನುತ್ತಾರೆ. ಜೀವನವೆಂದರೆ ಅವರಿಗೆ ಜೀವ ಜೀವಕೆ ಉದ್ದೀಪನವಾದುದಾಗಿದೆ.

ಪ್ರೊ. ಕಿ.ರಂ. ನಾಗರಾಜರು ಒಮ್ಮೆ ಬೇಂದ್ರೆಯವರ ಮನೆಗೆ ಹೋಗಿದ್ದಾಗ ನಡೆದ ಮಾತುಕತೆ ಬಗ್ಗೆ ಹೇಳಿದ್ದರು. ಬೆಂಗಳೂರಿನಿಂದ ಧಾರವಾಡಕ್ಕೆ ಬೇಂದ್ರೆಯವರ ಮನೆಗೆ ಹೋಗುವುದಕ್ಕಾಗಿಯೇ ಪ್ರಯಾಣಿಸಿದ್ದ ಕಿ.ರಂ. ಅವರಿಗೆ ಪಂಪನ ಬಗ್ಗೆ ಬೇಂದ್ರೆಯವರ ಮಾತುಗಳನ್ನು ಕೇಳಬೇಕೆಂಬ ಆಸೆಯಿತ್ತು. ಒಂದೆರಡು ಗಂಟೆಗಳ ಕಾಲ ಮಾತನಾಡಿದರೂ ಲಕ್ಷ್ಮೀಶ, ಕುಮಾರವ್ಯಾಸ, ಇತ್ಯಾದಿ ಇತ್ಯಾದಿ ಮಾತನಾಡುತ್ತಿದ್ದರೇ ಹೊರತು ಪಂಪನ ಬಗ್ಗೆ ಮಾತು ಬರಲಿಲ್ಲ. ಲಹರಿಯಲ್ಲಿದ್ದ ಬೇಂದ್ರೆಯವರ ಮಾತುಗಳನ್ನು ಜೈನ ವಾಙ್ಮಯ